ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 4, Jan-Feb, 2023, Pp 1-4.**
**©*IIMRD*, Mysuru**
IIMRD JOURNALS

**www.iimrd.com**

# ಸಿದ್ಧಲಿಂಗಯ್ಯನವರ ಏಕಲವ್ಯ ನಾಟಕದಲ್ಲಿ ಸಾಮಾಜಿಕ ಚಿಂತನೆ

**ಚಂದ್ರಶೇಖರಪ್ಪ.. ಎಚ್.***

*ಸಂಶೋಧಕರು, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***ಸಾರಾಂಶ:(Abstract)***

*ಸಾಹಿತ್ಯವು ಒಂದು ನಾಡಿನ ಸಂಸ್ಕೃತಿಯ ಸಂಕೇತವಾಗಿದ್ದು ಸಮಾಜದ ಹಲವು ಸಂಗತಿಗಳು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಲ್ಪಡುತ್ತವೆ. ನಾಡಿನ ಜನ ಜೀವನದ ಬದುಕಿನ ಚಿತ್ರಣ, ಮೌಲ್ಯಗಳು, ಧರ್ಮ, ಕಲೆ,ಆಚಾರ ವಿಚಾರಗಳು ಸಾಹಿತ್ಯದ ವಿವಿಧ ಪ್ರಕಾರಗಳ ಒಡಲೊಳಗೆ ಅಡಗಿ ಸಮಗ್ರವಾದ ವಸ್ತು ಚಿತ್ರಣದೊರೆಯುವಂತೆ ರೂಪಗೊಂಡಿರುತ್ತವೆ. ಅಂತಹ ಸಾಹಿತ್ಯದ ಪ್ರಕಾರಗಳಲ್ಲಿ ನಾಟಕವೂ ಸಹ ಒಂದಾಗಿದೆ. 'ಕಾವ್ಯೇಷು ನಾಟಕಂ ರಮ್ಯ' ಎಂಬ ಸೂಕ್ತಿಯಂತೆ ಸಾಹಿತ್ಯದ ವಿಧಾನವು ನೋಡುಗರ ಭವಬಂಧನದಲ್ಲಿ ಮನಸೂರೆಗೊಳ್ಳುವಂತಹದ್ದಾಗಿದೆ. ಕನ್ನಡದ ಅನೇಕ ನಾಟಕಕಾರರು ಸಾಮಾಜಿಕ, ಪೌರಾಣಿಕ, ಐತಿಹಾಸಿಕ ವಿಷಯವನ್ನಾಯ್ದುಕೊಂಡು ನಮ್ಮ ಮುಂದೆ ಮರು ಸ್ಥಾಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ನವೋದಯ, ನವ್ಯ, ಪ್ರಗತಿಶೀಲ, ದಲಿತ ಬಂಡಾಯ ಕಾಲಘಟ್ಟಗಳಲ್ಲಿ ನಾಟಕಗಳು ಮಹತ್ವದ ಪಾತ್ರ ವಹಿಸಿವೆ. ಅಲ್ಲದೇ ಸಮಾಜದ ಸುಧಾರಣೆಗೆ ಶ್ರಮಿಸಿವೆ.*

***ಮುಖ್ಯಪದಗಳು (Keywords)*** *ಕನ್ನಡ ಸಾಹಿತ್ಯ, ನಾಟಕ, ಏಕಲವ್ಯ, ಸಾಮಾಜಿಕ ಚಿಂತನೆ*

**ಪೀಠಿಕೆ**

ಆಧುನಿಕ ಕಾಲ ಘಟ್ಟದಲ್ಲಿ ಬಿಎಂಶ್ರೀ, ಕುವೆಂಪು, ಮಾಸ್ತಿ, ಶ್ರೀರಂಗ, ಬೇಂದ್ರೆ ಹೀಗೆ ನಾಟಕಕಾರರ ಪಟ್ಟಿ ಬೆಳೆಯುತ್ತದೆ. ಇಂತವರ ಸಾಲಿನಲ್ಲಿ ಸಿದ್ಧಲಿಂಗಯ್ಯನವರ ಹೆಸರು ಮಹತ್ವ ಪಡೆಯುತ್ತದೆ. ಇವರ 'ಏಕಲವ್ಯ' ನಾಟಕವು ಮಹಾಭಾರತದ ಕಥೆಯಲ್ಲಿ ಬರುವಚಿಕ್ಕ ಪಾತ್ರವಾದರೂ ಏಕಲವ್ಯನ ಸಾಧನೆ, ಆತನ ಛಲದ ಮಹಿಮೆ ಅಮೋಘವಾದುದು. ಇಂದಿನ ಪೀಳಿಗೆಯ ಯುವಕರಿಗೆ ಸ್ಪೂರ್ತಿದಾಯಕವಾಗಿ, ಮಾದರಿಯಾಗಿ ನಿಲ್ಲುವ ವ್ಯಕ್ತಿತ್ವ ಏಕಲವ್ಯನದು. 70ರ ದಶಕದಲ್ಲಿ ಜನ್ಮ ತಾಳಿದ ದಲಿತ ಸಾಹಿತ್ಯ ಚಳುವಳಿಯ ರೂವಾರಿಗಳಲ್ಲಿ ಒಬ್ಬರಾದ ಸಿದ್ಧಲಿಂಗಯ್ಯನವರು ತಮ್ಮ ಸಾಹಿತ್ಯದ ಮೂಲಕ ಧ್ವನಿ ಇಲ್ಲದ ತಳಸಮುದಾಯಗಳಿಗೆ ಮಾತನಾಡುವ ಶಕ್ತಿಯನ್ನು ಬೆಳೆಸಿದರು. ತುಳಿತಕ್ಕೊಳಗಾದ ಜನರಿಗೆ ನೋವಿನ ಸೆಲೆಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವ ಸೃಜನಾತ್ಮಕ ಬರವಣಿಗೆಯಿಂದ ಸಾಹಿತ್ಯ ಕ್ಷೇತ್ರದಲ್ಲಿ ಅಜರಾಮರರಾಗಿದ್ದಾರೆ. ಆಧುನಿಕ ಜಗತ್ತಿನಲ್ಲಿ ವಿಜ್ಞಾನ ತಂತ್ರಜ್ಞಾನದ ಪ್ರಗತಿ, ಖಾಸಗಿಕರಣ, ನಗರೀಕರಣದ

*Please cite this article as: ಚಂದ್ರಶೇಖರಪ್ಪ.. ಎಚ್.* (2023). ಸಿದ್ಧಲಿಂಗಯ್ಯನವರ ಏಕಲವ್ಯ ನಾಟಕದಲ್ಲಿ ಸಾಮಾಜಿಕ ಚಿಂತನೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(4). ಪು.ಸಂ. 1–4.*

ಪ್ರಭಾವದಿಂದ ಪ್ರಾಕೃತಿಕ ಸಂಪತ್ತನ್ನು ನಾಶಗೊಳಿಸುವಿಕೆ ಭವಿಷ್ಯದಲ್ಲಿ ಅಪಾಯ ತಂದೊಡ್ಡುವುದನ್ನು ಏಕಲವ್ಯ ನಾಟಕವು ಸಂಕೇತಿಸುತ್ತದೆ. ಇದರಿಂದ ಕಾಡು ಹಾಗೂ ನಾಡಿನ ಸಂಘರ್ಷ ವಾಸ್ತವಕ್ಕೆ ಹತ್ತಿರವಾಗಿರುವುದನ್ನು ಧ್ವನಿಸುತ್ತದೆ. ಹಿಂದಿನಿಂದಲೂ ತನ್ನದೇ ಆದ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಂಡು ಬಂದಿರುವ ಕಾಡಿನ ಜನ ಜೀವನ ಪ್ರಸ್ತುತ ಆಧುನಿಕರಣಕ್ಕೊಳಗಾಗಿ ತನ್ನ ಅಸ್ಮಿತೆಯನ್ನು ಕಳೆದುಕೊಳ್ಳುವ ಆತಂಕ ಈ ನಾಟಕದಲ್ಲಿ ವ್ಯಕ್ತವಾಗಿದೆ. ಕಾಡಿನ ರಕ್ಷಣೆಯ ಪಣ ತೊಟ್ಟ ಏಕಲವ್ಯನು, ಬಿಲ್ವಿದ್ಯೆ ಕಲಿಯುವುದು ಕೇವಲ ಬಾಹುಬಲದ ಪ್ರದರ್ಶನಕ್ಕಲ್ಲ ಬದಲಾಗಿ ವನ ಸಂಪತ್ತಿನ ರಕ್ಷಣೆಯ ಮೂಲ ಉದ್ದೇಶದಿಂದ ಎಂಬ ಸಾಮಾಜಿಕ ಚಿಂತನೆಯ ಶ್ರೇಷ್ಠತೆಯನ್ನು ಗ್ರಹಿಸಬಹುದು. ಶೆಟ್ಟಿಯ ಕುಮ್ಮಕ್ಕಿನಿಂದ ಸೈನಿಕನು ನಡೆದುಕೊಳ್ಳುವ ರೀತಿ ಸಮಾಜದ ಭ್ರಷ್ಟತೆಯನ್ನು ಅಭಿವ್ಯಕ್ತಿಸುತ್ತದೆ. ವಿಶಾಲವಾದ ವನ ಸಂಪತ್ತು ಅದರ ಪ್ರಶಾಂತತೆಯನ್ನು ಹಾಳು ಮಾಡುವ ಪ್ರತಿಷ್ಠಿತ ಸಮುದಾಯದ ಜನರು ತಳಸಮುದಾಯದವರ ನೋವು, ಹತಾಶೆ ಹಾಗೂ ಆತಂಕಕ್ಕೆ ಕಾರಣವಾಗುವುದನ್ನು ಕಾಣಬಹುದು. ಬೋರಣ್ಣ ಮತ್ತು ಗಾಳಣ್ಣರು, ಶೆಟ್ಟಿ ಹಾಗೂ ಸೈನಿಕನನ್ನು ಪ್ರತಿಭಟಿಸಿ ಯಶಸ್ವಿಯಾಗುತ್ತಾರೆ. ಆದರೆ ನಾಡಿನವರ ಅಕ್ರಮ ಶೀಲತೆಯನ್ನು ತಡೆಯಲಾಗದೆ ಹಿಂಸೆಗೊಳಗಾಗುವುದು ಶೋಚನೀಯ ಸಂಗತಿಯಾಗಿದೆ.

ಏಕಲವ್ಯನ ಸಮಯೋಚಿತವಾದ ನಿರ್ಧಾರವು ಎಲ್ಲವನ್ನು ಮೆಟ್ಟಿ ನಿಂತು ವೀರತ್ವ ಪಡೆಯಲು ಸಾಧ್ಯವಾಯಿತು ಎಂಬುದು, ಅಲ್ಲದೆ ಜಾತಿ ವರ್ಗ ಪ್ರಜ್ಞೆಗಳ ತಾರತಮ್ಯವನ್ನು ಧಿಕ್ಕರಿಸಿ ಸಮಾನತೆಯ ಚಿಂತನೆಯನ್ನು ಗಳಿಸಿದ್ದು ಹೆಮ್ಮೆಯ ವಿಚಾರವಾಗಿದೆ. ಅಂತರಂಗದಲ್ಲಿ ಸಮಾಜ ನಡೆದುಕೊಳ್ಳುವುದರ ಬಗ್ಗೆ ತಿರಸ್ಕಾರದ ಭಾವನೆ ಇದ್ದರೂ ಏಕಾಗ್ರಚಿತ್ತದಿಂದ, ತಾಳ್ಮೆಯಿಂದ ನಿಭಾಯಿಸಿದ ಏಕಲವ್ಯ ವಿಶಿಷ್ಟ ವ್ಯಕ್ತಿತ್ವವನ್ನಾಗಿ ಗುರುತಿಸಲ್ಪಡುತ್ತಾನೆ. ಅದಕ್ಕಾಗಿ ಬಸವರಾಜ ಸಬರದವರು ಏಕಲವ್ಯನ ಕುರಿತಾಗಿ "ಈತನಲ್ಲಿ ಮನಸು ಕಟ್ಟುವ ಕೆಲಸ ಮತ್ತು ಬುದ್ಧಿ ವಿಕಾಸ ಕಾರ್ಯವೆರಡೂ ಏಕಕಾಲದಲ್ಲಿ ನಡೆದಿವೆ"[1] ಎಂದು ಅಭಿಪ್ರಾಯಸಿದ್ದಾರೆ. ಕೌರವ ಪಾಂಡವರೊಡನೆ ನಡೆದುಕೊಳ್ಳುವ ರೀತಿ, ನಾಡಿನ ಉಪಟಳವನ್ನು ತಪ್ಪಿಸುವಲ್ಲಿ ತಳೆದ ನಿಲುವು ಅದಕ್ಕೆ ಸಾಕ್ಷಿಕರಿಸುವಂತಿದೆ. ಖಾಸಗಿಕರಣ ಉದಾರೀಕರಣ ಹಾಗೂ ಜಾಗತೀಕರಣದಿಂದ ಪ್ರಸ್ತುತ ವಿದ್ಯಮಾನಗಳನ್ನು ಗಮನಿಸಿದಾಗ ವಿಕೃತರೀತಿಯ ಮಾನವ ವಿರೋಧಿ ನೀತಿಯಿಂದ ಹಲವು ಬದಲಾವಣೆಗಳಾಗಿ ತೀವ್ರವಾಗಿ ಶೋಷಣೆಗೆ ಒಳಗಾಗುತ್ತಿರುವವರು ಇದೀಗ ಪ್ರಪಂಚವನ್ನು ನೋಡಲು ಅಂಬೆಗಾಲಿಡುವ, ತೆವಳುವ, ಸಾಗುವ, ಎದ್ದು ನಿಲ್ಲುವುದಕ್ಕೆ ಪ್ರಾಯಾಸ ಪಡುವವರು ತಳ ಸಮುದಾಯಗಳು ಎಂಬುದು ಗಮನಾರ್ಹವಾದ ಸಂಗತಿ. ಅಕ್ಷರದ ಅರಿವನ್ನು ಪಡೆದು ಪ್ರಗತಿಪರ ಚಿಂತನೆಗೆ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ. ಸುತ್ತಲಿನ ವಿದ್ಯಮಾನಗಳನ್ನು ಗ್ರಹಿಸಿ ಅವಲೋಕಿಸುವ ಪ್ರಯತ್ನಗಳು ಇಂದು ನಡೆಯುತ್ತಿವೆ. ಇಂತಹ ತಳ ಸಮುದಾಯಗಳ ಜನರ ಕುರಿತ ಸಿದ್ದಲಿಂಗಯ್ಯನವರ ಸಾಹಿತ್ಯ ಮಾನವೀಯ ನೆಲೆಯಿಂದ ಮಾತನಾಡುತ್ತದೆ.

ಏಕಲವ್ಯ ನಾಟಕವು ದಲಿತ ಸಂಸ್ಕೃತಿಯ ನೋವಿನ ಅನಾವರಣದ ಜೊತೆಗೆ ಕಾಡು ಮತ್ತು ನಾಡಿನ ಸಂಸ್ಕೃತಿಯ ವಿಶ್ಲೇಷಣೆಯನ್ನು ಒಳಗೊಂಡಿದೆ. ಸಮಾಜದಲ್ಲಿರುವ ಹೀನ ಪದ್ಧತಿ ತಳಸಮುದಾಯದವರ ಪ್ರತಿಭೆಗೆ ಪೋಷಕವಾಗದೇ ನಿಯಂತ್ರಿಸುವ ಸ್ವಾರ್ಥ ಲಾಲಸೆಯನ್ನು ವಾಸ್ತವದ ನೆಲೆಗಟ್ಟಿನಲ್ಲಿ ಚಿತ್ರಿಸಲ್ಪಟ್ಟಿದೆ. 'ರಾಜಸತ್ತೆ ಈ ದೇಶದ ಸಮಸೃಷ್ಟಿಗೆ ವೈರಿಯಾದಂತೆ; ಮತ ಧರ್ಮದಿಂದ ಹುಟ್ಟಿಕೊಂಡು ಜಾತಿ

ವ್ಯವಸ್ಥೆಯೂ ಕೂಡ ಅಷ್ಟೇ ಭಯಾನಕವಾಗಿದೆ' ಎಂಬ ಬಸವರಾಜ ಸಬರದರ ಮಾತು ಈ ನಾಟಕದಲ್ಲಿ ಬರುವ ಸೈನಿಕ ಶೆಟ್ಟಿಯ ಸಂಭಾಷಣೆಗೆ ಪೂರಕವಾದಂತಿದೆ.

ಪ್ರಸ್ತುತ ನಾಟಕದಲ್ಲಿ ವರ್ಣ ಶೋಷಣೆ ಮತ್ತು ಜಾತಿ ಶೋಷಣೆಯ ಪರಿಣಾಮಗಳನ್ನು ಸಂಕೀರ್ಣವಾಗಿ ವಿಶ್ಲೇಷಿಸಿದ್ದಾರೆ. ಸಾಮಾಜಿಕ ಅಸಮಾನತೆ, ಸಂಪತ್ತಿನ ಅಸಮಾನತೆ, ಜಾತಿಯ ಶೋಷಣೆಯಂತಹ ಗಂಭೀರವಾದ ಸಂಗತಿಗಳನ್ನು ವಿವಿಧ ನೆಲೆಯಲ್ಲಿ ನಿರೂಪಿಸಿದ್ದಾರೆ. "ಎಂಥಾ ಬೆಪ್ಪರಯ್ಯ ನೀವು! ಮಹಾರಾಜರ ಅಪ್ಪಣೆಯ ಕೇಳಿಯೇ ನಾವಿಲ್ಲಿಗೆ ಬಂದದ್ದು. ನಮಗೆ ಬರೋ ಲಾಭದಲ್ಲಿ ಅವರಿಗೆ ಸೂಕ್ತವಾದ ಪಾಲು ಹೋಗೋದ್ರಿಂದ ಇದಕ್ಕೆ ಅವ್ರ ಅನುಮತಿ ಉಂಟೇ ಹೊರತು ಅಭ್ಯಂತರವಿಲ್ಲ. ಯಾಕಂದ್ರೆ ಕಾಡು ಅವರಿಗೆ ಸೇರಿದ್ದು"[2] ಎಂಬ ಶೆಟ್ಟಿಯ ಮಾತು ರಾಜನ ನಿರಂಕುಶಮತಿಯ ಸ್ವಭಾವವನ್ನು ಎತ್ತಿ ತೋರಿಸುತ್ತದೆ. ಅಲ್ಲದೆ ವಾಸ್ತವದ ರಾಜಕೀಯ ಸ್ಥಿತಿಗತಿಯ ಮೇಲೆ ಬೆಳಕು ಚೆಲ್ಲುವುದಾಗಿದೆ. ಈ ದೇಶದ ಸಂಪತ್ತು ಎಲ್ಲರಿಗೆ ಸೇರಿದ್ದು ಅದನ್ನು ರಕ್ಷಿಸುವ ಜವಾಬ್ದಾರಿ ಸರ್ವರಿಗೂ ಉಂಟು. ಆದರೆ ಕಾಡುರಾಜನಿಗೆ ಸೇರಿದ್ದು ಎಂಬಂತಹ ಹೊಣೆಗೇಡಿತನದ ಮಾತು ಅರ್ಥರಹಿತವಾದುದು. ಆಳುವ ವರ್ಗದ ಶೋಷಿಸುವ ಧೋರಣೆಯು ಶ್ರಮ ಸಂಸ್ಕೃತಿಯ ಮೇಲೆ ಹೇರುವ ಒತ್ತಡ ಹಾಗೂ ಹಿಂಸೆಯ ಪರಮಾವಧಿಯನ್ನು ನೋಡಿದರೆ ಸರ್ವರ ಏಳಿಗೆಯ ಕನಸು ಅಸಾಧ್ಯವೆಂಬುದನ್ನು ಸಂಕೇತಿಸುತ್ತದೆ. ಇದನ್ನು ಗಮನಿಸಿದರೆ ನಾಟಕಕಾರರ ಮೇಲೆ ಅಂಬೇಡ್ಕರ್, ಮಾರ್ಕ್ಸ್‌ವರ ಪ್ರಭಾವ ಬೀರಿರುವುದನ್ನು ಗಮನಿಸಬಹುದು.

ನಾಡಿನ ರಕ್ಷಣೆಯ ಪಣತೊಟ್ಟು ತಾಯಿಯ ಆಶೀರ್ವಾದ ಪಡೆದು ಖ್ಯಾತಿಗಳಿಸಿದ ದ್ರೋಣರಲ್ಲಿಗೆ ಹೋಗಿ ಬಿಲ್ವಿದ್ಯೆಗೆ ಅರ್ಹನಲ್ಲವೆಂಬ ಮಾತುಗಳಿಂದ ಶೋಷಣೆಗೊಳಗಾದ ಏಕಲವ್ಯನು "ನನ್ನ ಜನ್ಮಕ್ಕೆ ಧಿಕ್ಕಾರವಿರಲಿ, ಈ ಜನ್ಮದಲ್ಲಿ ನನ್ನನ್ನು ಅಪಮಾನಕ್ಕೆ ಈಡು ಮಾಡಿದ ಹಿಂದಣ ಜನ್ಮದ ನನ್ನ ಪಾಪ ಪರಂಪರೆಗೆ ಧಿಕ್ಕಾರವಿರಲಿ. ಹೆಚ್ಚು ಕಲಿಯಬೇಕೆಂಬ ಆಸೆಯ ಕಿಡಿಯನ್ನು ನನ್ನ ಎದೆಯಲ್ಲಿ ಹೊತ್ತಿಸಿದ ನನ್ನ ಜ್ಞಾನದಾಹಕ್ಕೆ ಧಿಕ್ಕಾರವಿರಲಿ"[3] ಎಂಬ ರೋಷ ಆವೇಶದ ಮಾತುಗಳು ಸಮಾಜದ ಅಸಮಾನತೆ ಹಾಗೂ ಆಳುವ ವರ್ಗದವರ ನಡವಳಿಕೆಯನ್ನು ಪ್ರತಿರೋಧಿಸುವುದರ ಜೊತೆಗೆ ಶಿಕ್ಷಣದ ಹಕ್ಕು ಎಲ್ಲರಿಗೂ ಸೇರಿದ್ದು ಅದು ಯಾರಿಗೂ ಸೀಮಿತವಲ್ಲದ್ದು ಎಂಬ ವಿಚಾರಕ್ಕೆ ಪೂರಕವಾದ ಅಂಶವಾಗಿದೆ. ಆಧುನಿಕ ಯುಗದಲ್ಲಿ ಏಕಲವ್ಯನಂತಹ ಎಷ್ಟೋ ತರುಣರು ಅನ್ಯಾಯಕ್ಕೆ ಒಳಗಾಗಿರುವುದನ್ನು ಇದು ಸೂಚಿಸುತ್ತದೆ. ಆದರೆ ಅದನ್ನೆಲ್ಲ ಮೆಟ್ಟಿ ನಿಂತು ಛಲವನ್ನು ಮೆರೆದ ಏಕಲವ್ಯ ಎಲ್ಲರಿಗೂ ಸ್ಫೂರ್ತಿಯ ಶಿಖರವಾಗಿ ನಿಲ್ಲುತ್ತಾನೆ.

ಯಾವುದೇ ಸಂಸ್ಕೃತಿಯನ್ನು ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯ. ಆದರೆ ಏಕಲವ್ಯನ ವೇಷಭೂಷಣವನ್ನು ನೋಡಿ ಆತನ ಬೇಟೆಯ ಸಂಸ್ಕೃತಿಯನ್ನು ನೋಡಿ ಹೀಯಾಳಿಸುವುದು ಕಂಡುಬರುತ್ತದೆ. ಸಿದ್ಧಲಿಂಗಯ್ಯನವರು ಪ್ರಸ್ತುತ ನಾಗರಿಕ ಸಂಸ್ಕೃತಿಯ ದೌರ್ಬಲ್ಯಗಳನ್ನು ವಿಷದೀಕರಿಸಿದ್ದಾರೆ. ಏಕಲವ್ಯ ಮತ್ತು ಅರ್ಜುನರ ಮುಖಾಮುಖಿ ಕೇವಲ ಪಾತ್ರಗಳ ಸಂಘರ್ಷವಾಗದೆ ಎರಡು ವಿಭಿನ್ನ ಸಂಸ್ಕೃತಿಗಳ ಮುಖಾಮುಖಿಯನ್ನು ಇಲ್ಲಿ ಕಾಣಬಹುದು. ನಗರ ಸಂಸ್ಕೃತಿ ಹಾಗೂ ಕಾಡಿನ ಸಂಸ್ಕೃತಿಗಳ ನಡುವಿನ ಅಪಾರವಾದ ವ್ಯತ್ಯಾಸವನ್ನು ಈ ನಾಟಕದಿಂದ ಗ್ರಹಿಸಬಹುದು. ಆಡಂಬರವಿಲ್ಲದ ಏಕಲವ್ಯನ ನಯ ವಿನಯ, ಸರಳವಾದ ಸ್ವಭಾವ, ಗುರುವಿನ ಬಗೆಗಿರುವ ಅಮೂಲ್ಯವಾದ ಭಕ್ತಿ, ಹೃದಯ ವೈಶಾಲ್ಯತೆ,

ಮುಗ್ಧ ಸ್ವಭಾವ, ಕಾಡಿನ ಸಂಸ್ಕೃತಿ ಹಾಗೂ ಮೇಲ್ವರ್ಗದವರ ಅಹಂಕಾರ, ಅಧಿಕಾರದ ಮದ, ಕೀರ್ತಿಯ ಆಸೆ, ತಾವೇ ಶ್ರೇಷ್ಠರೆಂಬ ಭೀಮಾರ್ಜುನರ ಮಾತುಗಳು, ವಿದ್ಯೆಯನ್ನು ತಿರಸ್ಕರಿಸಿದ ದ್ರೋಣರ ಅಸಮಾನತೆಯ ನಡೆ ಈ ನಾಟಕದಲ್ಲಿ ವ್ಯಕ್ತವಾಗಿವೆ.

ಕವಿತೆಗಳಿಗೆ ಸೀಮಿತವಾಗಿರದ ಸಿದ್ಧಲಿಂಗಯ್ಯನವರ ಸಾಹಿತ್ಯ ಕೃಷಿ ತಳಸಮುದಾಯದ ನೋವು, ಹಸಿವು, ಶೋಷಣೆ, ದೌರ್ಜನ್ಯ, ದಬ್ಬಾಳಿಕೆ ಕುರಿತ ಅಮಾನವೀಯ ಕೃತ್ಯಗಳ ವಿರುದ್ಧ ಸೆಣಸುವ ಕಥಾವಸ್ತುಗಳ ನಾಟಕಗಳನ್ನು ರಚಿಸಿ ಸೃಜನಾತ್ಮಕವಾಗಿ ಚಿತ್ರಿಸಿದ್ದಾರೆ. ಈ ಮೂಲಕ ಸಮಾಜದ ಒಳಿತಿಗಾಗಿ ಸಮಾನತೆಯ ಭಾವದಿಂದ ಬದುಕುವ ಆದರ್ಶಮಯ ವಿಚಾರಧಾರೆಗಳು ನಾಟಕದಲ್ಲಿ ಕೇಂದ್ರಿತವಾಗಿವೆ. ಏಕಲವ್ಯನು ಇಲ್ಲಿ ಸ್ವಾಭಿಮಾನಿಯಾಗಿ ಕಾಣಿಸಿಕೊಳ್ಳುತ್ತಾನೆ. ದಬ್ಬಾಳಿಕೆ ಹಾಗೂ ದೌರ್ಜನ್ಯಕ್ಕೀಡಾಗುವ ಸಮುದಾಯಗಳಿಗೆ ಮಾರ್ಗದರ್ಶಿಯಾಗಿ ತಾನು ತೆಗೆದುಕೊಳ್ಳುವ ನಿರ್ಧಾರಗಳಿಂದ ಸರಿಯಾದ ಮಾರ್ಗ ಕಂಡುಕೊಳ್ಳುವ ಹಾಗೂ ಸಮಾನತೆಯ ಜೊತೆಗೆ ಕಾಡು ನಾಡನ್ನು ರಕ್ಷಿಸುವಲ್ಲಿ ಯಶಸ್ವಿಯಾಗುತ್ತಾನೆ. ಪ್ರಕೃತಿಯ ಕೂಸು ಎಂಬಂತೆ ನಿರೂಪಿತವಾದ ಏಕಲವ್ಯನ ಬದುಕು ನಿಸರ್ಗದ ನಡುವಿನ ಬಾಂಧವ್ಯ ಹಾಗೂ ಆಪ್ತತೆಯನ್ನು ಸಂಕೇತಿಸುತ್ತದೆ. ಕಾಡಿನ ರಕ್ಷಣೆಯ ಜೊತೆಗೆ ವನಸಿರಿಯಲ್ಲಿನ ಆನಂದದಾಯಕ ಜೀವನ ಏಕಲವ್ಯನಲ್ಲಿ ಆದರ್ಶಮಯ ವ್ಯಕ್ತಿತ್ವ ಗೋಚರಿಸುವಂತೆ ಮಾಡಿದೆ. ಆತನ ಜೀವನಾನುಭವವು ಆಧುನಿಕ ಕಾಲದ ಜೀವನ ವಿಧಾನಕ್ಕೆ ಮಾರ್ಗದರ್ಶಿಯಾದುದು. ನಗರೀಕರಣದ ಪ್ರಭಾವಕ್ಕೆ ಒಳಗಾದ ಮಾನವ ಅರಣ್ಯ ನಾಶಕ್ಕೆ ಕಾರಣನಾಗಿ ವನ ಸಂಪತ್ತನ್ನು ಹಾಳು ಮಾಡಿ ಪ್ರಾಣಿ ಪಕ್ಷಿ ಸಂಕುಲದ ಅಳಿವಿಗೆ ಮುಂದಾಗಿದ್ದಾನೆ. ಏಕಲವ್ಯನ ನುಡಿಯನ್ನು ಅನುಸರಿಸುವ ಮಾನವ ಕುಲ ಸಮೃದ್ಧ ಬದುಕನ್ನು ಕಟ್ಟಿ ಕೊಳ್ಳಬಹುದು. ಇದರ ಅನಿವಾರ್ಯತೆ ವಾಸ್ತವಕ್ಕೆ ಅನಿವಾರ್ಯವೂ ಕೂಡ ಆಗಿದೆ.

**ಕೊನೆ ಟಿಪ್ಪಣಿಗಳು**

1. ಬಸವರಾಜ ಸಬರದ. (2017). ಚಿಂತನ ಲೇಖನಗಳು. ಪುಟ–46.
2. ಸಿದ್ಧಲಿಂಗಯ್ಯ. (2020). ಏಕಲವ್ಯ, ಪುಟ–21.
3. ಸಿದ್ಧಲಿಂಗಯ್ಯ. (2020). ಏಕಲವ್ಯ, ಪುಟ–33.

**ಪರಾಮರ್ಶನ ಗ್ರಂಥಗಳು.**


- ನರಸಿಂಹ ಮೂರ್ತಿಎಚ್ ಕೆ. (2009). ಕನ್ನಡ ಸಾಹಿತ್ಯದಲ್ಲಿ ಏಕಲವ್ಯ. ಸಾಮಾಜಿಕ ನ್ಯಾಯ ಸಂಸ್ಕೃತಿ ಪ್ರಕಾಶನ, ಹೊಸಕೋಟೆ.
- ರಾಮಲಿಂಗಪ್ಪ ಟಿ ಬೇಗೂರು. (2017). ನಾಟಕದಂಗೆ.ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ಶಾಮರಾಯತ ಸು. (2020). ಕನ್ನಡ ನಾಟಕ. ಪ್ರತಿಭಾ ಪ್ರಕಾಶನ, ಮೈಸೂರು.
- ಶಿವರುದ್ರಪ್ಪ ಜಿ ಎಸ್. (2012). ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ. ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
- ಸಿದ್ಧಲಿಂಗಯ್ಯ. (2020). *ಏಕಲವ್ಯ*. ಅಂಕಿತ ಪುಸ್ತಕ ಬೆಂಗಳೂರು.